4) ಬೇಂಗಳೂರು ನಗರಕ್ಕೆ ಶುದ್ಧ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ನಗರದ ಯಾವುದೇ ಪ್ರದೇಶದಲ್ಲಿ ಪೂರೈಕೆಯಾಗುತ್ತಿರುವ ನೀರಿನ ಗುಣಮಟ್ಟದಲ್ಲಿ ವ್ಯತ್ಯಾಸ ಕಂಡು ಬಂದು, ಕಲ್ಮಶ ಮತ್ತು ಹುಳುಹುಪ್ಪಟೆಗಳ ದೂರು ಬಂದರೆ, ತಕ್ಷಣ ಸ್ಥಳ ಪರಿಶೀಲನೆ ಮಾಡಿ, ಆಪ್ರದೇಶದ ನೀರಿನ ಮಾದರಿಯನ್ನು ಜಲಮಂಡಳಿಯ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

5) ಸಿ.ಪಿ.ಹೆಚ್.ಇ.ಇ.ಓ (ಸೆಂಟ್ರಲ್ ಪಬ್ಲಿಕ್ ಹೆಲ್ತ್ ಅಂಡ್ ಎನ್ವಿರಾನ್ಮೆಂಟಲ್ ಇಂಜಿನಿಯರಿಂಗ್ ಆರ್ಗನೈಜೇಷನ್) ನಗರಾಭಿವೃದ್ಧಿ ಇಲಾಖೆ, ಭಾರತ ಸರ್ಕಾರ, ನವದೆಹಲಿ ನಿಗದಿಪಡಿಸಿರುವಂತೆ ಮೆಟ್ರೋಪಾಲಿಟನ್ ಹಾಗೂ ಮೆಗಾಸಿಟಿಗಳಿಗೆ ದಿನಪ್ರತಿ 150 ಲೀಟರ್ ಪ್ರತಿ ವ್ಯಕ್ತಿಗೆ ನೀರನ್ನು ಕೊಡಬೇಕಾಗಿರುತ್ತದೆ. ಬೆಂಗಳೂರು ಜಲಮಂಡಳಿಯು ಹೆಚ್ಚುವರಿಯಾಗಿ ದಿನಂಪ್ರತಿ 500 ದಶಲಕ್ಷ ಲೀಟರ್ ನೀರನ್ನು ತರುವ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಈ ಯೋಜನೆಯು ಪೂರ್ತಿಯಾಗಿ ನಗರಕ್ಕೆ ನೀರು ಲಭ್ಯವಾದ ನಂತರ ಬೆಂಗಳೂರು ನಗರದ ನಾಗರೀಕರಿಗೆ ದಿನಂಪ್ರತಿ 150 ಲೀಟರ್ ಪ್ರತಿ ವ್ಯಕ್ತಿಗೆ ಸರಬರಾಜು ಮಾಡಲಾಗುತ್ತಿದೆ.

ಬೆಳಗಾವಿಯ ಸಂಪೂರ್ಣ ಅಭಿವೃದ್ಧಿ

344 : (451)

ಶ್ರೀ ಅಭಯ್ ಪಾಟೀಲ್ ಮಾನ್ಯ ವಿಧಾನಸಭಾ ಸದಸ್ಯರು (ಬೆಳಗಾಂ ದಕ್ಷಿಣ)

ಅ) ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸನ್ 1924ನೇ ಸಾಲಿನಲ್ಲಿ ಬೆಳಗಾವಿಯಲ್ಲಿ ನಡೆದಿರುವ 39ನೇ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಸವಿನೆನಪಿಗಾಗಿ ಬೆಳಗಾವಿ ಸಂಪೂರ್ಣ ಅಭಿವೃದ್ಧಿಗಾಗಿ ಸಿದ್ಧಪಡಿಸಿದ ಪ್ರಸ್ತಾವನೆಯ ಕುರಿತು ಅನುದಾನದ ಮಂಜೂರಾತಿಗಾಗಿ ಮಾನ್ಯ ಪ್ರಧಾನ ಮಂತ್ರಿಗಳೊಂದಿಗೆ ಚರ್ಚಿಸುವ ಉದೇಶವು ಸರ್ಕಾರದ ಮುಂದಿದೆಯೇ;

ಅ) ಈ ಕುರಿತು ಯಾರು ಎಷ್ಟು ಬಾರಿ ರಾಜ್ಯ ಸರ್ಕಾರವನ್ನು, ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಪ್ರಧಾನ ಮಂತ್ರಿಗಳನ್ನು ವಿನಂತಿಸಿರುವ ಬಗ್ಗೆ ಮಾಹಿತಿಯನ್ನು ನೀಡುವುದು.

ಇ) ಪ್ರಧಾನಮಂತ್ರಿಗಳ ಭೇಟಿಗಾಗಿ ದಿನಾಂಕ ಹಾಗೂ ಸಮಯವನ್ನು ನಿಗದಿಪಡಿಸಲಾಗಿದೆಯೇ; ಇಲ್ಲವಾದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ ಭೇಟಿಗಾಗಿ ದಿನಾಂಕ ಹಾಗೂ ಸಮಯವನ್ನು ಯಾವಾಗ ಪಡೆಯಲಾಗುವುದು?

ಶ್ರೀ ಎಸ್. ಸುರೇಶ ಕುಮಾರ್

(ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು)

ಅ) ಹೌದು

ಆ) ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸನ್ 1924ರಲ್ಲಿ ಬೆಳಗಾವಿಯಲ್ಲಿ ಜರುಗಿದ 39ನೇ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದು, ಅವರು ಭೇಟಿ ನೀಡಿದ ಸುಸಂದರ್ಭದ ಸವಿನೆನಪಿಗಾಗಿ ಬೆಳಗಾವಿ ನಗರದ ಸಂಪೂರ್ಣ ಅಭಿವೃದ್ಧಿಯನ್ನು ಸರ್ವತೋಮುಖವಾಗಿ ಕಾರ್ಯಗತಗೊಳಿಸಲು ಸಿದ್ಧಪಡಿಸಿದ ಕ್ರಿಯಾ ಯೋಜನೆಯ ಪ್ರಸ್ತಾವನೆಗೆ ಕೇಂದ್ರದ ಅನುದಾನ ಮಂಜೂರಾತಿ ಕುರಿತಂತೆ ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಲು ಮಾನ್ಯ ಮುಖ್ಯಮಂತ್ರಿಗಳು 4–5 ಬಾರಿ ಪತ್ರಗಳನ್ನು ಬರೆದು ಕೋರಿರುತ್ತಾರೆ. ಮಾನ್ಯ ವಿಧಾನಸಭಾ ಸದಸ್ಯರು (ಬೆಳಗಾಂದಕ್ಷಿಣ)ರವರು ಒಂದು ಭಾರಿ ಕೋರಿದ್ದು ಹಾಗೂ ವಿಧಾನಸಭೆಯಲ್ಲಿಯೂ ಈ ಬಗ್ಗೆ ಸಹ ಪ್ರಸ್ತಾಪಿಸಿರುತ್ತಾರೆ.

ಇ) ಮಾನ್ಯ ಪ್ರಧಾನ ಮಂತ್ರಿಗಳ ಭೇಟಿಗಾಗಿ ಹಲವಾರು ಭಾರಿ ಪತ್ರಗಳನ್ನು ಬರೆದಿದ್ದು, ಈವರೆವಿಗೂ ಪ್ರಧಾನಮಂತ್ರಿಗಳ ಕಛೇರಿಯಿಂದ ಯಾವುದೇ ಉತ್ತರ ಬಂದಿರುವುದಿಲ್ಲ.